# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತಾರನೆಯ ಅಧಿವೇಶನ

## ಸಾರಾಂಶ

ದಿನಾಂಕ: 10.12.2018 ರಿಂದ 21.12.2018ವರೆಗೆ

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ
ವಿಧಾನ ಸೌಧ, ಬೆಂಗಳೂರು-560 001

*********

# ಕರ್ನಾಟಕ ವಿಧಾನ ಪರಿಷತ್ತು

ವಿಧಾನ ಪರಿಷತ್ತಿನ ನೂರ ಮೂವತ್ತಾರನೆಯ ಅಧಿವೇಶನವು ದಿನಾಂಕ: 10.12.2018 ರಿಂದ 21.12.2018ರ ವರೆಗೆ ಒಟ್ಟು 10 ದಿನಗಳ ಉಪವೇಶನ ನಡೆಯಿತು. ಅಧಿವೇಶನದ ಒಟ್ಟು ಅವಧಿ 47 ಗಂಟೆ 03 ನಿಮಿಷಗಳು. (**ವಿವರಣಾ ಪಟ್ಟಿ**–1)

## 01. ಸಂತಾಪ ಸೂಚನೆಗಳು

**ಈ ಕೆಳಕಂಡ ಗಣ್ಯವ್ಯಕ್ತಿಗಳು ನಿಧನರಾದುದಕ್ಕೆ ಸದನದಲ್ಲಿ ಸಂತಾಪವನ್ನು ವ್ಯಕ್ತಪಡಿಸಲಾಯಿತು.**

| ಕ್ರ.ಸಂ. | **ಹೆಸರು** | **ಹೊಂದಿದ ಸ್ಥಾನಮಾನ** | **ದಿನಾಂಕ** |
|---|---|---|---|
| 01 | ಅಟಲ್ ಬಿಹಾರಿ ವಾಜಪೇಯಿ | ಭಾರತದ ಮಾಜಿ ಪ್ರಧಾನ ಮಂತ್ರಿಗಳು | 10.12.2018 |
| 02 | ಹೆಚ್.ಎನ್. ಅನಂತಕುಮಾರ್ | ಕೇಂದ್ರದ ಹಾಲಿ ಸಚಿವರು ಹಾಗೂ ಲೋಕಸಭಾ ಸದಸ್ಯರು | 10.12.2018 |
| 03 | ಸೋಮನಾಥ್ ಚಟರ್ಜಿ | ಮಾಜಿ ಲೋಕಸಭಾ ಸದಸ್ಯರು | 10.12.2018 |
| 04 | ಸಿ.ಕೆ. ಜಾಫರ್ ಷರೀಫ್ | ಮಾಜಿ ಕೇಂದ್ರ ಸಚಿವರು ಹಾಗೂ ಲೋಕಸಭಾ ಸದಸ್ಯರು | 10.12.2018 |
| 05 | ಡಾ: ಎಂ.ಹೆಚ್. ಅಂಬರೀಷ್ | ಕೇಂದ್ರದ ಮತ್ತು ರಾಜ್ಯದ ಮಾಜಿ ಸಚಿವರು | 10.12.2018 |
| 06 | ಮೀರ್ ಅಜೀಜ್ ಅಹಮದ್ | ವಿಧಾನ ಪರಿಷತ್ತಿನ ಮಾಜಿ ಸದಸ್ಯರು | 10.12.2018 |
| 07 | ಓಂಪ್ರಕಾಶ್ ಕಣಗಲಿ | ಮಾಜಿ ಸಚಿವರು ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರು | 10.12.2018 |
| 08 | ತಿಪ್ಪೇಸ್ವಾಮಿ | ಮಾಜಿ ಸಚಿವರು ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರು | 10.12.2018 |
| 09 | ಈ.ಟಿ. ಶಂಭುನಾಥ್ | ಮಾಜಿ ಸಚಿವರು ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರು | 10.12.2018 |
| 10 | ವಿಮಲಾಬಾಯಿ ಜಗದೇವರಾವ್ ದೇಶಮುಖ್ | ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರು | 10.12.2018 |
| 11 | ಎಂ.ಕರುಣಾನಿಧಿ | ತಮಿಳುನಾಡು ಮಾಜಿ ಮುಖ್ಯಮಂತ್ರಿ | 10.12.2018 |
| 12 | ಡಾ: ಸಿದ್ದಲಿಂಗಸ್ವಾಮಿ | ಗದುಗಿನ ತೋಂಟದಾರ್ಯ ಮಠ | 10.12.2018 |
| 13 | ಡಾ: ಸುಮತೀಂದ್ರ ನಾಡಿಗ | ಕನ್ನಡದ ಹಿರಿಯ ಸಾಹಿತಿ | 10.12.2018 |
| 14 | ಜ.ಹೋ.ನಾರಾಯಣಸ್ವಾಮಿ | ಕನ್ನಡದ ಹಿರಿಯ ಸಾಹಿತಿ | 10.12.2018 |
| 15 | ಚಾಮರಾಜ ನಗರ ಜಿಲ್ಲೆ ಹನೂರು ತಾಲ್ಲೂಕು ರಾಮಪುರ ಹೋಬಳಿ, ಸುಳ್ವಾಡಿ ಗ್ರಾಮದಲ್ಲಿ ವಿಷಪೂರಿತ ದೇವರ ಪ್ರಸಾದ ಸೇವನೆಯಿಂದ ಮೃತಪಟ್ಟವರ ಹಾಗೂ ಮುಧೋಳದ ಡಿಸ್ಟಿಲರಿ ಕಾರ್ಖಾನೆಯಲ್ಲಿ ಬಾಯ್ಲರ್ ಸ್ಫೋಟಗೊಂಡು ದುರ್ಮರಣಕ್ಕೀಡಾದವರ ಬಗ್ಗೆ. | | 17.12.2018 |

## 2. ನೂತನ ಸದಸ್ಯರ ಪರಿಚಯ

ದಿನಾಂಕ:10.12.2018ರಂದು ಮಾನ್ಯ ಸಭಾಪತಿಯವರು ವಿಧಾನ ಪರಿಷತ್ತಿಗೆ ನೂತನವಾಗಿ ಚುನಾಯಿತರಾಗಿರುವ ಈ ಕೆಳಕಂಡ ಮಾನ್ಯ ಸದಸ್ಯರುಗಳನ್ನು ಸದನಕ್ಕೆ ಪರಿಚಯಿಸಿದರು.

**ಶ್ರೀಯುತರುಗಳಾದ:**

1. ಸುನೀಲ್‌ಗೌಡ ಬಸನಗೌಡ ಪಾಟೀಲ್
2. ನಸೀರ್ ಅಹ್ಮದ್
3. ಎಂ.ಸಿ.ವೇಣುಗೋಪಾಲ್
4. ಹೆಚ್.ಎಂ.ರಮೇಶ್‌ಗೌಡ
5. ಯು.ಬಿ.ವೆಂಕಟೇಶ್
6. ಪ್ರಕಾಶ್ ಕೆ. ರಾಥೋಡ್

### 03. ಸಭಾಪತಿ ಸ್ಥಾನಕ್ಕೆ ಚುನಾವಣೆ

ದಿನಾಂಕ:12.12.2018 ರಂದು ನಡೆದ ವಿಧಾನ ಪರಿಷತ್ತಿನ ಸಭಾಪತಿ ಸ್ಥಾನದ ಚುನಾವಣೆಗೆ 3 ಸೂಚನಾ ಪತ್ರಗಳನ್ನು ಸ್ವೀಕರಿಸಲಾಗಿದ್ದು, 3 ಸೂಚನಾ ಪತ್ರಗಳು ಮಾನ್ಯ ಸದಸ್ಯರಾದ **ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ** ಅವರ ಹೆಸರನ್ನು ಸೂಚಿಸಿರುತ್ತವೆ. **ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ** ಅವರನ್ನು ಸಭಾಪತಿಯವರಾಗಿ ಸರ್ವಾನುಮತದಿಂದ ಚುನಾಯಿಸಲಾಯಿತು.

### 04.ಉಪ ಸಭಾಪತಿ ಸ್ಥಾನಕ್ಕೆ ಚುನಾವಣೆ

ದಿನಾಂಕ:19.12.2018 ರಂದು ನಡೆದ ವಿಧಾನ ಪರಿಷತ್ತಿನ ಉಪ ಸಭಾಪತಿ ಸ್ಥಾನದ ಚುನಾವಣೆಗೆ 2 ಸೂಚನಾ ಪತ್ರಗಳನ್ನು ಸ್ವೀಕರಿಸಲಾಗಿದ್ದು, 2 ಸೂಚನಾ ಪತ್ರಗಳು ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಧರ್ಮೇಗೌಡ ಅವರ ಹೆಸರನ್ನು ಸೂಚಿಸಿರುತ್ತವೆ. ಶ್ರೀ ಎಸ್.ಎಲ್. ಧರ್ಮೇಗೌಡ ಅವರನ್ನು ಉಪ ಸಭಾಪತಿಯಾಗಿ ಸರ್ವಾನುಮತದಿಂದ ಚುನಾಯಿಸಲಾಯಿತು.

### 05. ಕಾರ್ಯದರ್ಶಿಯವರ ವರದಿ

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ಘನತೆವೆತ್ತ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ದಿನಾಂಕ: 11.12.2018 ರಂದು ಕಾರ್ಯದರ್ಶಿಯವರು ಸದನದಲ್ಲಿ ಮಂಡಿಸಿದರು. **(ವಿವರಣಾ ಪಟ್ಟಿ-2)** ರಲ್ಲಿ ವಿವರಿಸಿದೆ.

### 06. ಪ್ರಶ್ನೆಗಳು

ದಿನಾಂಕ:10.12.2018 ರಿಂದ 21.12.2018ರ ವರೆಗೆ ನಡೆದ ಅಧಿವೇಶನದಲ್ಲಿ ಒಟ್ಟು 1347 ಪ್ರಶ್ನೆಗಳನ್ನು ಸ್ವೀಕರಿಸಿದ್ದು, ಅದರಲ್ಲಿ 150 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳಾಗಿ ಅಂಗೀಕರಿಸಲಾಗಿರುತ್ತದೆ. ಅವುಗಳ ಪೈಕಿ 94 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 41 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು. ಲಿಖಿತ ಮೂಲಕ ಉತ್ತರಿಸುವ ಒಟ್ಟು 1197 ಪ್ರಶ್ನೆಗಳ ಪೈಕಿ 1020 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರವನ್ನು ಮಂಡಿಸಲಾಯಿತು.

## ೦7. ಶೂನ್ಯವೇಳೆ

ಪ್ರಸ್ತುತ ಅಧಿವೇಶನದಲ್ಲಿ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗಳನ್ನು ವಿವರಣಾ ಪಟ್ಟಿ – ೩ ರಲ್ಲಿ ವಿವರಿಸಿದೆ.

## ೦8. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

೦1. ಪ್ರಸ್ತುತ ಅಧಿವೇಶನದಲ್ಲಿ ಒಟ್ಟು ೦2 ಪಟ್ಟಿಗಳನ್ನು ಸಭೆಯ ಮುಂದೆ ಮಂಡಿಸಲಾಯಿತು. (ವಿವರಣಾ ಪಟ್ಟಿ_ 4)

೦2. ದಿನಾಂಕ:18.12.2018ರಂದು **ಶ್ರೀ ಹೆಚ್.ಡಿ.ಕುಮಾರಸ್ವಾಮಿ** (ಮಾನ್ಯ ಮುಖ್ಯಮಂತ್ರಿಗಳು) ಅವರ ಪರವಾಗಿ ಮಾನ್ಯ ಸಭಾನಾಯಕರು ಈ ಕೆಳಕಂಡ ವರದಿಗಳನ್ನು ಸದನದಲ್ಲಿ ಮಂಡಿಸಿದರು.

(ಅ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್, 2018ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಘನತ್ಯಾಜ್ಯ ನಿರ್ವಹಣೆಯ ಮೇಲಿನ ಕಾರ್ಯನಿರ್ವಹಣಾ ವರದಿ (ಸಂಖ್ಯೆ-4).

(ಆ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್, 2018ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಸರ್ಕಾರಿ ಭೂಮಿ ಮಂಜೂರಾತಿ, ಗುತ್ತಿಗೆ, ಒತ್ತುವರಿಗಳ ತೆರವುಗೊಳಿಸುವಿಕೆ ಹಾಗೂ ಅಕ್ರಮ ಹಿಡುವಳಿಗಳನ್ನು ಸಕ್ರಮಗೊಳಿಸುವಿಕೆಗಳ ಬಗ್ಗೆ ವರದಿ (ಸಂಖ್ಯೆ-5).

## ೦9. ಪ್ರಕಟಣೆ

೦1. ದಿನಾಂಕ: 10.12.2018 ಹಾಗೂ 13.12.2018 ರಂದು ಮಾನ್ಯ ಸಭಾಪತಿಯವರ ಮತ್ತು ಉಪ ಸಭಾಪತಿಯವರ ಗೈರುಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣೆ ಮಾಡುವ ಸದಸ್ಯರುಗಳ ಪಟ್ಟಿಯನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

೦2. ದಿನಾಂಕ: 13.12.2018ರಂದು ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ರಚಿಸಿರುವ ಬಗ್ಗೆ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

೦3. ದಿನಾಂಕ: 13.12.2018ರಂದು ಕಾರ್ಯಕಲಾಪಗಳ ಸಲಹಾ ಸಮಿತಿಯ ತೀರ್ಮಾನವನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

೦4. ದಿನಾಂಕ:18.12.2018ರಂದು ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ **ಡಾ: ವೈ.ಎ.ನಾರಾಯಣಸ್ವಾಮಿ** ಅವರನ್ನು ವಿಧಾನ ಪರಿಷತ್ತಿನ ವಿರೋಧ ಪಕ್ಷದ ಉಪ ನಾಯಕರನ್ನಾಗಿ ನೇಮಕ ಮಾಡಲಾಗಿದೆ ಎಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

## 10. ಗಮನ ಸೆಳೆಯುವ ಸೂಚನೆಗಳು

ಪ್ರಸ್ತುತ ಅಧಿವೇಶನದಲ್ಲಿ ನಿಯಮ 72ರಡಿಯಲ್ಲಿ ಚರ್ಚಿಸಿದ ಸೂಚನೆಗಳನ್ನು ವಿವರಣಾ ಪಟ್ಟಿ – 5 ರಲ್ಲಿ ವಿವರಿಸಲಾಗಿದೆ.

**11. ನಿಯಮ 330ರ ಮೇರೆಗೆ**

ಪ್ರಸ್ತುತ ಅಧಿವೇಶನದಲ್ಲಿ ನಿಯಮ 330ರಡಿಯಲ್ಲಿ ಚರ್ಚಿಸಿದ ಸೂಚನೆಗಳನ್ನು ವಿವರಣಾ ಪಟ್ಟಿ – 6ರಲ್ಲಿ ವಿವರಿಸಲಾಗಿದೆ.

**12. ನಿಯಯ 59ರ ಮೇರೆಗೆ**

01). ದಿನಾಂಕ:11.12.2018ರಂದು ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮಾನ್ಯ ವಿರೋಧ ಪಕ್ಷದ ನಾಯಕರು) ಹಾಗೂ ಇತರರು ರಾಜ್ಯದಲ್ಲಿ ಭೀಕರ ಬರಗಾಲ ಮತ್ತು ಈ ಸಂಬಂಧ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಬಗ್ಗೆ ನಿಯಮ 59ರ ಅಡಿಯಲ್ಲಿ ಪ್ರಸ್ತಾಪಿಸಿದರು. ಸದರಿ ಸೂಚನೆಯನ್ನು ನಿಯಮ 68ರಡಿಯಲ್ಲಿ ಚರ್ಚಿಸಿ ದಿನಾಂಕ:19.12.2018ರಂದು ಉತ್ತರಿಸಲಾಯಿತು.

02). ದಿನಾಂಕ:17.12.2018ರಂದು ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮಾನ್ಯ ವಿರೋಧ ಪಕ್ಷದ ನಾಯಕರು) ಚಾಮರಾಜ ನಗರ ಜಿಲ್ಲೆ, ಹನೂರು ತಾಲ್ಲೂಕು ಸುಳವಾಡಿ ಗ್ರಾಮದ ಕಿಚ್ಚುಗುತ್ತಿ ಮಾರಮ್ಮ ದೇವಸ್ಥಾನದಲ್ಲಿ ವಿಷಯುಕ್ತ ಪ್ರಸಾದ ಸೇವಿಸಿ 14 ಜನರು ಮೃತಪಟ್ಟಿರುವ ಬಗ್ಗೆ ನಿಯಮ 59ರ ಅಡಿಯಲ್ಲಿ ಪ್ರಸ್ತಾಪಿಸಿದರು. ಸದರಿ ಸೂಚನೆಯನ್ನು ನಿಯಮ 68ರಡಿ ಚರ್ಚಿಸಿ ಮಾನ್ಯ ಉಪ ಮುಖ್ಯಮಂತ್ರಿಯವರು ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಉತ್ತರಿಸಿದರು.

03). ದಿನಾಂಕ:20.12.2018ರಂದು ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮಾನ್ಯ ವಿರೋಧ ಪಕ್ಷದ ನಾಯಕರು) ಉತ್ತರ ಕರ್ನಾಟಕದ ಬಹುತೇಕ ನೀರಾವರಿ ಯೋಜನೆಗಳು ನೆನೆಗುದಿಗೆ ಬಿದ್ದಿದ್ದು, ಕೃಷ್ಣಾ ಮೇಲ್ದಂಡೆ ಯೋಜನೆಯ ಆಲಮಟ್ಟಿ ಜಲಾಶಯದ ಎತ್ತರವನ್ನು ಏರಿಸದಿರುವುದು ಹಾಗೂ ಹೆಚ್ಚುವರಿ ಲಭ್ಯವಾಗಿರುವ ನೀರನ್ನು ಸದ್ಬಳಕೆ ಮಾಡಿಕೊಳ್ಳದಿರುವ ಬಗ್ಗೆ ನಿಯಮ 59ರ ಅಡಿಯಲ್ಲಿ ಪ್ರಸ್ತಾಪಿಸಲು ಅನುಮತಿ ಕೋರಿದರು. ಮಾನ್ಯ ಸಭಾನಾಯಕರು ಪ್ರಶ್ನೋತ್ತರ ಅವಧಿ ಮುಗಿದ ನಂತರ ಚರ್ಚೆಗೆ ಅವಕಾಶ ನೀಡಬೇಕೆಂದು ಕೋರಿದರು.

ಮಾನ್ಯ ಮುಖ್ಯ ಮಂತ್ರಿಯವರು ಪ್ರಶ್ನೋತ್ತರದ ನಂತರ ಚರ್ಚೆ ಮಾಡಲಿ ಎಂದು ತಿಳಿಸಿದ್ದರಿಂದ ಮಾನ್ಯ ಮುಖ್ಯ ಮಂತ್ರಿಯವರ ಉತ್ತರವನ್ನು ವಿರೋಧಿಸಿ ವಿರೋಧ ಪಕ್ಷದ ಸದಸ್ಯರು ಸದನದ ಬಾವಿಗೆ ಇಳಿದು ಧರಣಿ ನಡೆಸಿದರು.

ಮಾನ್ಯ ಸಭಾಪತಿಯವರು ಚರ್ಚೆಗೆ ಅವಕಾಶ ನೀಡದ ಕಾರಣ ದಿನಾಂಕ:21.12.2018 ರಂದು ಧರಣಿ ನಡೆಸಿದರು.

**13. ವರದಿಗಳನೊಪ್ಪಿಸುವುದು**

ಪ್ರಸ್ತುತ ಅಧಿವೇಶನದಲ್ಲಿ ಸದನದಲ್ಲಿ ಒಪ್ಪಿಸಲಾದ ವರದಿಗಳ ಮಾಹಿತಿಯನ್ನು ವಿವರಣಾ ಪಟ್ಟಿ - 7 ರಲ್ಲಿ ವಿವರಿಸಲಾಗಿದೆ.

**14. ಅರ್ಜಿಯನೊಪ್ಪಿಸುವುದು**

**ದಿನಾಂಕ:13.12.2018ರಂದು ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮಾನ್ಯ ವಿರೋಧ ಪಕ್ಷದ ನಾಯಕರು)** ಅವರು ಉಡುಪಿ ಜಿಲ್ಲೆ, ಶಿವಳ್ಳಿ ಗ್ರಾಮದ ಸರ್ವೆ ನಂ. 51ರಲ್ಲಿ 0.50 ಎಕರೆ ಜಮೀನನ್ನು ಜಿ.ಎಸ್.ಬಿ ಟ್ರಸ್ಟ್ (ರಿ) ಮಣಿಪಾಲ ಇವರಿಗೆ ಮಂಜೂರಾತಿ ನೀಡುವ ಕುರಿತು ಅರ್ಜಿಯನ್ನು ಸದನಕ್ಕೆ ಒಪ್ಪಿಸಿದರು.

**15. ಶಾಸನ ರಚನೆ**

ವಿಧಾನ ಸಭೆಯಲ್ಲಿ ಅಂಗೀಕೃತಗೊಂಡು ವಿಧಾನ ಪರಿಷತ್ತಿನ ಸಹಮತಿ ಪಡೆದಿರುವ ವಿಧೇಯಕಗಳ ಪಟ್ಟಿಯನ್ನು (ವಿವರಣಾ ಪಟ್ಟಿ-8) ರಲ್ಲಿ ತೋರಿಸಲಾಗಿದೆ.

**16. ವಿತ್ತೀಯ ಕಾರ್ಯಕಲಾಪಗಳು**

ದಿನಾಂಕ:14.12.2018 ರಂದು 2018-19ನೇ ಸಾಲಿನ ರಾಜ್ಯ ಹಣಕಾಸಿನ ಮಧ್ಯ ವಾರ್ಷಿಕ ಪರಿಶೀಲನಾ ವರದಿಯನ್ನು ಹಾಗೂ ಭಾರತ ಸಂವಿಧಾನ 205(1)(ಎ)ರ ಅನುಚ್ಛೇದದ ಮೇರೆಗೆ 2018-19ನೇ ಸಾಲಿನ ಪೂರಕ ಅಂದಾಜುಗಳನ್ನು (ಮೊದಲನೇ ಕಂತನ್ನು) ಮಾನ್ಯ ಸಭಾನಾಯವರು ಸದನಕ್ಕೆ ಒಪ್ಪಿಸಿದರು.

**17. ಚುನಾವಣಾ ಪ್ರಸ್ತಾವಗಳು**

ದಿನಾಂಕ:13.12.2018ರಂದು ಮಾನ್ಯ ಸಭಾನಾಯಕರು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್‌ಗೆ ಅಧಿನಿಯಮ 1994 ಕಲಂ 21(1)ರ ರೀತ್ಯಾ ವಿಧಾನ ಪರಿಷತ್ತಿನ ಇಬ್ಬರು ಸದಸ್ಯರುಗಳನ್ನು ಹಾಗೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕಾಯ್ದೆ 2009ರ ಪ್ರಕರಣ 20(ಐ)ರನ್ವಯ ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ಗೆ ವಿಧಾನ ಪರಿಷತ್ತಿನ ಒಬ್ಬ ಸದಸ್ಯರನ್ನು ಚುನಾಯಿಸಬೇಕೆಂಬ ಪ್ರಸ್ತಾವವನ್ನು ಮಂಡಿಸಿ ಅಂಗೀಕರಿಸಲಾಯಿತು.

ದಿನಾಂಕ:21.12.2018ರಂದು ಮಾನ್ಯ ಸಭಾನಾಯಕರು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್‌ಗೆ ವಿಧಾನ ಪರಿಷತ್ತಿನ ಇಬ್ಬರು ಸದಸ್ಯರನ್ನು ಹಾಗೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್‌ಗೆ ವಿಧಾನ ಪರಿಷತ್ತಿನ ಒಬ್ಬ ಸದಸ್ಯರನ್ನು ಚುನಾಯಿಸುವ ಬದಲು ನಾಮನಿರ್ದೇಶಿಸುವ ಅಧಿಕಾರವನ್ನು ಮಾನ್ಯ ಸಭಾಪತಿಯವರಿಗೆ ನೀಡುವ ಪ್ರಸ್ತಾವವನ್ನು ಮಂಡಿಸಿ ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

**18. ಸದಸ್ಯರುಗಳ ಖಾಸಗಿ ಕಾರ್ಯಕಲಾಪಗಳು**

ದಿನಾಂಕ: 14.12.2018 ರಂದು ಶ್ರೀ ಶರಣಪ್ಪ ಮಟ್ಟೂರ ಅವರು 2018ನೇ ಸಾಲಿನ ಕರ್ನಾಟಕ ಅಸಲು ಹಣಕಿಂತ ಹೆಚ್ಚು ಬಡ್ಡಿ ವಿಧಿಸುವಿಕೆ ನಿಷೇಧ ವಿಧೇಯಕವನ್ನು ಮಂಡಿಸಿದರು.

**19. ಧರಣಿ ಮತ್ತು ಸಭಾತ್ಯಾಗ**

01. ದಿನಾಂಕ:11.12.2018 ರಂದು ನಿಯಮ 72ರಡಿಯಲ್ಲಿ (ಗಮನ ಸೆಳೆಯುವ ಸೂಚನೆ) ದಿನಾಂಕ:01.04.2006ರ ನಂತರ ನೇಮಕಾತಿ ಹೊಂದಿರುವ ಸರ್ಕಾರಿ ನೌಕರರುಗಳಿಗೆ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸುವ ಕುರಿತು ಪ್ರಸ್ತಾಪಿಸಲಾಗಿದ್ದು, ಸರ್ಕಾರವು ನೀಡಿದ ಉತ್ತರವನ್ನು ವಿರೋಧಿಸುತ್ತಾ ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಸದನದ ಬಾವಿಗೆ ಧಾವಿಸಿ **ಧರಣಿ** ನಡೆಸಿದರು.

02. ದಿನಾಂಕ:13.12.2018 ರಂದು ದಿನಾಂಕ:12.12.2018ರ ಕಾರ್ಯಕಲಾಪಗಳ ಪಟ್ಟಿಯಲ್ಲಿದ್ದ ಗಮನ ಸೆಳೆಯುವ ಸೂಚನೆಯಾದ ಟಿಪ್ಪು ಸುಲ್ತಾನ್ ಜಯಂತಿಯ ಆಚರಣೆಯ ಕುರಿತಂತೆ ಇಂದಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ಇಲ್ಲದಿರುವ ಬಗ್ಗೆ ವಿರೋಧ ಪಕ್ಷದ ನಾಯಕರು ಪ್ರಸ್ತಾಪಿಸಲಾಗಿ ಮಾನ್ಯ ಸಚಿವರು ನೀಡಿದ ಉತ್ತರಕ್ಕೆ ಅಸಮಾದಾನ ವ್ಯಕ್ತಪಡಿಸುತ್ತಾ ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಮಾನ್ಯ ವಿರೋಧ ಪಕ್ಷದ ನಾಯಕರ ನೇತೃತ್ವದಲ್ಲಿ ಸದನದ ಬಾವಿಗೆ ಧಾವಿಸಿ **ಧರಣಿ** ನಡೆಸಿದರು.

03. ದಿನಾಂಕ: 17.12.2018 ರಂದು ಪ್ರಶ್ನೆ ಸಂಖ್ಯೆ:88(44)ಕ್ಕೆ ಸಚಿವರು ನೀಡಿದ ಉತ್ತರವನ್ನು ವಿರೋಧಿಸುತ್ತಾ ಸದನ ಸಮಿತಿ ರಚನೆ ಮಾಡುವಂತೆ ಒತ್ತಾಯಿಸಿ ವಿರೋಧ ಪಕ್ಷದ ಸದಸ್ಯರು ಸದನದ ಬಾವಿಗೆ ಧಾವಿಸಿ **ಧರಣಿ** ನಡೆಸಿದರು.

04. ದಿನಾಂಕ:19.12.2018 ರಂದು ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:106(37)ಕ್ಕೆ ಸಚಿವರು ನೀಡಿದ ಉತ್ತರವನ್ನು ವಿರೋಧಿಸುತ್ತಾ ಮಾನ್ಯ ಸದಸ್ಯರುಗಳು ಧರಣಿ ನಡೆಸಿದರು.

05. ದಿನಾಂಕ:20.12.2018 ಮತ್ತು 21.12.2018 ರಂದು ವಿರೋಧ ಪಕ್ಷದ ನಾಯಕರು ಉತ್ತರ ಕರ್ನಾಟಕದ ಬಹುತೇಕ ನೀರಾವರಿ ಯೋಜನೆಗಳು ಪೂರ್ಣವಾಗಿ ನೆನಗುದಿಗೆ ಬಿದ್ದಿದ್ದು, ಕೃಷ್ಣ ಮೇಲ್ದಂಡೆ ಯೋಜನೆಯ ಆಲಮಟ್ಟಿ ಜಲಾಶಯದ ಎತ್ತರವನ್ನು ಏರಿಸದಿರುವುದು ಹಾಗೂ ಹೆಚ್ಚುವರಿ ಲಭ್ಯವಾಗಿರುವ ನೀರನ್ನು ಸದ್ಬಳಕೆ ಮಾಡಿಕೊಳ್ಳದಿರುವ ಕುರಿತು ನಿಯಮ 59ರ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ನೀಡದ ಕಾರಣ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರುಗಳು ಸದನದ ಬಾವಿಗೆ ಧಾವಿಸಿ ಧರಣಿ ನಡೆಸಿದರು.

06. ದಿನಾಂಕ:12.12.2018 ರಂದು ನಿಯಮ 330ರ ಅಡಿಯಲ್ಲಿ ಸರ್ಕಾರವು ಅನುದಾನಿತ ಶಿಕ್ಷಣ ಸಂಸ್ಥೆಗಳ ಕಾಲ್ಪನಿಕ ವೇತನ ಬಡ್ತಿ ಸಮಸ್ಯೆಯನ್ನು ಪರಿಹರಿಸುವ ಬಗ್ಗೆ ಪ್ರಸ್ತಾಪಿಸಲಾಗಿದ್ದು, ಉನ್ನತ ಶಿಕ್ಷಣ ಸಚಿವರು ನೀಡಿದ ಉತ್ತರಕ್ಕೆ ಅಸಮಾಧಾನ ವ್ಯಕ್ತಪಡಿಸುತ್ತಾ ಶ್ರೀ ಪುಟ್ಟಣ್ಣ ಹಾಗೂ ವಿರೋಧ ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು.

07. ದಿನಾಂಕ:13.12.2018 ರಂದು ನಿಯಮ 330ರ ಅಡಿಯಲ್ಲಿ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಆಶ್ರಯದಲ್ಲಿ ಕೈಗೊಂಡ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ನೀಡುವಲ್ಲಿ ವಿಳಂಬವಾಗಿರುವ ಬಗ್ಗೆ ಪ್ರಸ್ತಾಪಿಸಲಾಗಿದ್ದು ಮಾನ್ಯ ಸಚಿವರು ನೀಡಿದ ಉತ್ತರವನ್ನು ಪ್ರತಿಭಟಿಸಿ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರುಗಳು **ಸಭಾತ್ಯಾಗ** ಮಾಡಿದರು.

08. ದಿನಾಂಕ:19.12.2018 ರಂದು 2018ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ:3) ವಿಧೇಯಕವನ್ನು ಪರ್ಯಾಲೋಚಿಸಿ ಅಂಗೀಕರಿಸುವ ಸಂದರ್ಭದಲ್ಲಿ ಮಾನ್ಯ ಸಚಿವರು ನೀಡಿದ ಉತ್ತರಕ್ಕೆ ವಿರೋಧ ವ್ಯಕ್ತಪಡಿಸುತ್ತಾ ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಮಾನ್ಯ ವಿರೋಧ ಪಕ್ಷದ ನಾಯಕರ ನೇತೃತ್ವದಲ್ಲಿ **ಸಭಾತ್ಯಾಗ** ಮಾಡಿದರು.

09. ದಿನಾಂಕ:19.12.2018ರಂದು ನಿಯಮ 68ರಡಿಯಲ್ಲಿ ರಾಜ್ಯದಲ್ಲಿ ಭೀಕರ ಬರಗಾಲ ಮತ್ತು ಈ ಸಂಬಂಧ ರೈತರು ಆತ್ಮಹತ್ಯೆಗೆ ಒಳಗಾಗುತ್ತಿರುವ ಬಗ್ಗೆ ನಡೆದ ಚರ್ಚೆಗೆ ಕಂದಾಯ ಸಚಿವರು ನೀಡಿದ ಉತ್ತರವನ್ನು ವಿರೋಧಿಸಿ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರುಗಳು ಸಭಾತ್ಯಾಗ ಮಾಡಿದರು.

**20. ಅಧಿವೇಶನ ಮುಂದೂಡಿಕೆ**

ದಿನಾಂಕ:10.12.2018ರಂದು ಪ್ರಾರಂಭಗೊಂಡ ವಿಧಾನ ಪರಿಷತ್ತಿನ 136ನೆಯ ಅಧಿವೇಶನವನ್ನು ದಿನಾಂಕ:21.12.2018ರಂದು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಯಿತು.

**ಕೆ.ಆರ್.ಮಹಾಲಕ್ಷ್ಮಿ**
**ಕಾರ್ಯದರ್ಶಿ**

**ವಿವರಣಾ ಪಟ್ಟಿ–1**

| ಕ್ರಮ ಸಂಖ್ಯೆ | ಅಧಿವೇಶನ ನಡೆದ ದಿನಾಂಕ | ಪ್ರಾರಂಭಗೊಂಡ ಸಮಯ | ಅಂತ್ಯಗೊಂಡ ಸಮಯ | | ಒಟ್ಟು ಸಮಯ |
|---|---|---|---|---|---|
| 1. | 10.12.2018 | ಮ: 12.16 | ಮ: 1.55 | 1.39 | 1.39 |
| 2. | 11.12.2018 | ಬೆ: 10.12<br>ಮ: 03.25 | ಮ: 02.20<br>ಸಂ: 06.36 | 4.08<br>3.11 | 7.39 |
| 3. | 12.12.2018 | ಬೆ: 10.50<br>ಮ: 03.25 | ಮ: 01.55<br>ಸಂ: 07.28 | 3.05<br>4.03 | 7.08 |
| 4. | 13.12.2018 | ಬೆ: 10.50<br>ಮ: 03.30<br>ಮ: 03.55<br>ಸಾ: 05.20 | ಮ: 01.50<br>ಮ: 03.45<br>ಮ: 04.37<br>ಸಂ: 07.35 | 3.00<br>0.15<br>0.42<br>2.15 | 6.12 |
| 5. | 14.12.2018 | ಬೆ: 10.36 | ಮ: 01.57 | 3.21 | 3.21 |
| 6. | 15.12.2018 | ಕಾರ್ಯಕಲಾಪಗಳಿರುವುದಿಲ್ಲ | | | |
| 7. | 16.12.2018 | ಸಾರ್ವತ್ರಿಕ ರಜಾದಿನ | | | |
| 8. | 17.12.2018 | ಬೆ: 11.36<br>ಮ: 01.47<br>ಮ: 03.44 | ಮ: 01.08<br>ಮ: 02.30<br>ಸಂ: 07.21 | 1.32<br>0.43<br>3.36 | 5.52 |
| 9. | 18.12.2018 | ಬೆ: 11.44<br>ಮ: 03.34 | ಮ: 02.02<br>ಸಂ: 07.57 | 2.18<br>4.23 | 6.41 |
| 10. | 19.12.2018 | ಬೆ: 11.15<br>ಮ: 04.06 | ಮ: 02.37<br>ಸಂ: 07.42 | 3.22<br>3.36 | 6.58 |
| 11. | 20.12.2018 | ಬೆ: 11.32<br>ಮ: 12.51<br>ಮ: 02.49<br>ಮ: 04.05<br>ಸಾ: 05.17 | ಮ: 12.21<br>ಮ: 01.04<br>ಮ: 02.55<br>ಮ: 04.11<br>ಸಾ: 05.21 | 0.49<br>0.13<br>0.06<br>0.06<br>0.04 | 1.18 |
| 12. | 21.12.2018 | ಬೆ: 11.29<br>ಮ: 12.12 | ಬೆ: 11.31<br>ಮ:12.25 | 0.02<br>0.13 | 0.15 |
| | | | | | 47.03 |

**ವಿವರಣಾ ಪಟ್ಟಿ-2**

**ಘನತೆವೆತ್ತ ರಾಷ್ಟ್ರಪತಿ ಮತ್ತು ರಾಜ್ಯಪಾಲರಿಂದ ಒಪ್ಪಿಗೆ ಪಡೆದಿರುವ ವಿಧೇಯಕಗಳ ಪಟ್ಟಿ**

| ಕ್ರಮ ಸಂಖ್ಯೆ | ವಿಧೇಯಕಗಳ ಪಟ್ಟಿ | ಒಪ್ಪಿಗೆಯನ್ನು ಪಡೆದ ದಿನಾಂಕ | ಒಪ್ಪಿಗೆಯನ್ನು ನೀಡಿದವರು |
|---|---|---|---|
| 01. | ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ವಿಧೇಯಕ,2017 | 14.06.2018 | ರಾಷ್ಟ್ರಪತಿಯವರು |
| 02. | ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ,2018 | 18.07.2018 | ರಾಜ್ಯಪಾಲರು |
| 03. | ಕರ್ನಾಟಕ ಧನವಿನಿಯೋಗ (ಸಂಖ್ಯೆ.2) ವಿಧೇಯಕ,2018 | 18.07.2018 | ರಾಜ್ಯಪಾಲರು |
| 04. | ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಅಥವಾ ಮಾರಾಟದ ಮೇಲೆ ತೆರಿಗೆ ನಿರ್ಧರಣೆ) (ತಿದ್ದುಪಡಿ) ವಿಧೇಯಕ–2018 | 18.07.2018 | ರಾಜ್ಯಪಾಲರು |

**ವಿವರಣಾ ಪಟ್ಟಿ–3**
**ಶೂನ್ಯವೇಳೆ ಪ್ರಸ್ತಾವಗಳು**

| ಕ್ರ. ಸಂ | ಸದಸ್ಯರ ಹೆಸರು ಶ್ರೀಮತಿ/ಶ್ರೀಯುತರುಗಳಾದ | ಸದನದಲ್ಲಿ ಚರ್ಚಿಸಿದ ದಿನಾಂಕ | ವಿಷಯ | ಷರಾ |
|---|---|---|---|---|
| 01 | **ಶ್ರೀನಿವಾಸ ವಿ.ಮಾನೆ** | 11.12.2018 | ಬೆಳಗಾವಿ ವಿಭಾಗದಲ್ಲಿನ ರೈತರ ಸಾಲವನ್ನು ಮನ್ನಾ ಮಾಡಿ ಅವರುಗಳಿಗೆ ಸಾಲ ಋಣಮುಕ್ತ ಪತ್ರ ನೀಡುವ ಕುರಿತು | ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಉತ್ತರಿಸಿದರು ಹಾಗೂ ಲಿಖಿತ ಮೂಲಕ ಉತ್ತರವನ್ನು ನಂತರ ಒದಗಿಸುವುದಾಗಿ ತಿಳಿಸಿದರು. |
| 02 | **ಎಸ್.ವ್ಹಿ ಸಂಕನೂರ** | 11.12.2018 | ಉತ್ತರ ಕನ್ನಡ ಜಿಲ್ಲೆಯ ಶಿರಸಿ ಶೈಕ್ಷಣಿಕ ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿನ ಅಕ್ಷರ ದಾಸೋಹ ಅಡುಗೆ ಸಿಬ್ಬಂದಿಗಳಿಗೆ ನೀಡಲಾದ ಫೈಯರ್ ಪ್ರೂಫ್ ಏಪ್ರಾನ್ ಖರೀದಿಯಲ್ಲಿ ಅವ್ಯವಹಾರ ನಡೆದಿರುವ ಕುರಿತು | ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು. |
| 03 | **ಅರುಣ ಶಹಾಪೂರ** | 11.12.2018 | ಪ್ರಾಥಮಿಕ ಮತ್ತು ಪ್ರೌಢ ಶಾಲೆಯ ಶಿಕ್ಷಕರು ಹಾಗೂ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಿಗೆ ವಿಶೇಷ ವಾರ್ಷಿಕ ವೇತನ ಬಡ್ತಿ ನೀಡುವಲ್ಲಿ ಅನ್ಯಾಯವಾಗಿರುವ ಬಗ್ಗೆ | ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು. |
| 04 | **ಐವನ್ ಡಿ' ಸೋಜಾ** | 11.12.2018 | ಅತಿಥಿ ಶಿಕ್ಷಕರಿಗೆ ಬಾಕಿಯಿರುವ ಗೌರವಧನ ಪಾವತಿಸುವ ಬಗ್ಗೆ. | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |

| | | | | |
|---|---|---|---|---|
| 05 | **ಕೆ.ಸಿ. ಕೊಂಡಯ್ಯ** | 11.12.2018 | ಶ್ರೀ ಕುಕ್ಕೆ ಸುಬ್ರಮಣ್ಯ ದೇವಸ್ಥಾನದ ಅಭಿವೃದ್ಧಿಗಾಗಿ ಪ್ರಾಧಿಕಾರ ರಚಿಸುವ ಬಗ್ಗೆ | ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ಮುಜರಾಯಿ ಸಚಿವರು ಉತ್ತರಿಸಿದರು |
| 06 | **ಎನ್. ಅಪ್ಪಾಜಿಗೌಡ** | 11.12.2018 | ಪಹಣಿ, ಮ್ಯುಟೇಷನ್ ಮತ್ತು ಕಂದಾಯ ಆಸ್ತಿಗಳ ದಾಖಲೆ ಪತ್ರಗಳನ್ನು ಪಡೆಯುವ ಶುಲ್ಕ ಹೆಚ್ಚಳ ಮಾಡಿರುವ ಕುರಿತು | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |
| 07 | **ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ್**(ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು) | 12.12.2018 | ಮಲಪ್ರಭಾ ನದಿ ಸಂರಕ್ಷಣೆಗೆ ಸೂಕ್ತ ಕ್ರಮ ಕೈಗೊಳ್ಳುವ ಕುರಿತು | ಮಾನ್ಯ ಸಭಾನಾಯಕರು ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು. |
| 08 | **ಎನ್.ರವಿಕುಮಾರ್** | 12.12.2018 | ಮೆ:ಪ್ರೆಸ್ಟೀಜ್ ಟೆಕ್‌ಪಾರ್ಕ್ 3ರಲ್ಲಿನ ವಾಣಿಜ್ಯ ಸ್ಥಳಗಳನ್ನು ಮಾರ್ಗಸೂಚಿ ದರಕ್ಕಿಂತ ಕಡಿಮೆ ದರದಲ್ಲಿ ನೋಂದಣಿ ಮಾಡಿ ಸರ್ಕಾರಕ್ಕೆ ನಷ್ಟ ಉಂಟುಮಾಡಿರುವ ಬಗ್ಗೆ | ಮಾನ್ಯ ಸಭಾನಾಯಕರು ಮಾನ್ಯ ಕಂದಾಯ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |
| 09 | **ಘೋಟ್ನೆಕರ್ ಶ್ರೀಕಾಂತ್ ಲಕ್ಷ್ಮಣ** | 12.12.2018 | ರಾಜ್ಯದ ಸರ್ಕಾರಿ ನೌಕರರಿಗೆ ನಿಶ್ಚಿತ ಪಿಂಚಣಿ ಯೋಜನೆ ಮರು ಜಾರಿಗೆ ತರುವ ಕುರಿತು | ಮಾನ್ಯ ಸಭಾನಾಯಕರು ಮಾನ್ಯ ಮುಖ್ಯ ಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |
| 10 | **ಅರುಣ ಶಹಾಪುರ** | 12.12.2018 | ಇ–ಆಡಳಿತ ತಂತ್ರಾಂಶದ ಲೋಪದಿಂದ 31 ಲಕ್ಷ ಹಿಂದುಳಿದ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲು ವಿಳಂಬವಾಗಿರುವ ಬಗ್ಗೆ | ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು. |
| 11 | **ಎಸ್.ವ್ಹಿ.ಸಂಕನೂರ** | 12.12.2018 | ದಿನಾಂಕ:16.12.2018ರಂದು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿ ಹುದ್ದೆಗಳಿಗೆ ಕೆ.ಪಿ.ಎಸ್.ಸಿ ಯವರು ನಡೆಸುತ್ತಿರುವ ಪರೀಕ್ಷೆ ಮತ್ತು ರಾಷ್ಟ್ರೀಯ ಅರ್ಹತಾ ಪರೀಕ್ಷೆ(ಸೆಟ್) ಏಕಕಾಲಕ್ಕೆ ನಿಗಧಿಯಾಗಿರುವುದರಿಂದ | ಮಾನ್ಯ ಸಭಾನಾಯಕರು ಸಂಬಂಧಪಟ್ಟ ಸಚಿವರಿಂದ ಉತ್ತರಕೊಡಿಸುವುದಾಗಿ ತಿಳಿಸಿದರು. |

| | | | | |
|---|---|---|---|---|
| | | | ಪದವೀಧರ ವಿದ್ಯಾರ್ಥಿಗಳು ಆತಂಕಗೊಂಡಿರುವ ಬಗ್ಗೆ | |
| 12 | **ಘೋಟ್ನೇಕರ್ ಶ್ರೀಕಾಂತ್ ಲಕ್ಷ್ಮಣ** | 13.12.2018 | ಆರೋಗ್ಯ ಇಲಾಖೆಯಲ್ಲಿನ ಗುತ್ತಿಗೆ ನೌಕರರಿಗೆ ವೇತನದ ಜೊತೆಗೆ ಇತರೆ ಸೌಲಭ್ಯಗಳನ್ನು ನೀಡುವ ಕುರಿತು | ದಿನಾಂಕ:18.12.2018 ರಂದು ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು. |
| 13 | **ಎಂ.ಪಿ. ಸುನೀಲ್ ಸುಬ್ರಮಣಿ** | 13.12.2018 | ಮಡಿಕೇರಿ ನಗರಸಭೆಯು ಗುಡ್ಡಗಾಡು ಪ್ರದೇಶವಾಗಿರುವುದರಿಂದ ದಿನಾಂಕ:04.05.2017ರಂದು ನಗರಾಭಿವೃದ್ಧಿ ಇಲಾಖೆಯವರು ಹೊರಡಿಸಿರುವ ಸುತ್ತೋಲೆಯಿಂದಾಗಿ ಮಡಿಕೇರಿಯಲ್ಲಿ ಮನೆ ನಿರ್ಮಾಣ ಮಾಡಲು ತೊಂದರೆಯಾಗಿದ್ದು ಸದರಿ ಸುತ್ತೋಲೆಯನ್ನು ಹಿಂಪಡೆಯುವ ಅಥವಾ ಮಲೆನಾಡಿನ ಗುಡ್ಡಗಾಡು ಪ್ರದೇಶಗಳಿಗೆ ಇದರಿಂದ ವಿನಾಯಿತಿ ನೀಡುವ ಬಗ್ಗೆ | ಮಾನ್ಯ ನಗರಾಭಿವೃದ್ಧಿ ಹಾಗೂ ವಸತಿ ಸಚಿವರು ಉತ್ತರಿಸಿದರು. |
| 14 | **ಎಂ.ಕೆ ಪ್ರಾಣೇಶ್** | 13.12.2018 | ನ್ಯಾಯಬೆಲೆ ಅಂಗಡಿಯಲ್ಲಿ ಕೆಲವು ವಸ್ತುಗಳನ್ನು ಬಲವಂತವಾಗಿ ಗ್ರಾಹಕರುಗಳಿಗೆ ಮಾರಾಟ ಮಾಡುತ್ತಿರುವ ಬಗ್ಗೆ | ಮಾನ್ಯ ಸಭಾನಾಯಕರು ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |
| 15 | **ಅರುಣ ಶಹಾಪೂರ ಮತ್ತು ನಿರಾಣಿ ಹಣಮಂತ ರುದ್ರಪ್ಪ** | 13.12.2018 | ವಿಜಯಪುರ ನಗರದ ಬುರಾಣಪುರ ಗ್ರಾಮದಲ್ಲಿ ವಿಮಾನ ನಿಲ್ದಾಣವನ್ನು ನಿರ್ಮಾಣ ಮಾಡುವ ಕುರಿತು | ದಿ:14.12.2018ರಂದು ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು. |
| 16 | **ಆರ್. ಚೌಡರೆಡ್ಡಿ ತೂಪಲ್ಲಿ** | 13.12.2018 | ಕೋಶಿಸ್ ಕಾಲೇಜಿಗೆ ಬಿಬಿಎ (ಎವಿಯೇಷನ್ ಮ್ಯಾನೇಜ್‌ಮೆಂಟ್) ಕೋರ್ಸಿಗೆ ಹೆಚ್ಚುವರಿಯಾಗಿ 20 ವಿದ್ಯಾರ್ಥಿಗಳ ಪ್ರಮಾಣವನ್ನು ಹೆಚ್ಚಿಸುವ ಬಗ್ಗೆ | ಮಾನ್ಯ ಸಭಾನಾಯಕರು ಸಂಬಂಧಪಟ್ಟ ಸಚಿವರಿಂದ ಉತ್ತರಕೊಡಿಸುವುದಾಗಿ ತಿಳಿಸಿದರು. |
| 17 | **ಎನ್.ರವಿಕುಮಾರ್.** | 13.12.2018 | ರಾಜ್ಯದಲ್ಲಿ ಅನ್ಯ ಭಾಷೆಗಳನ್ನು ವೈಭವೀಕರಿಸುವುದು ಹಾಸ್ಯಾಸ್ಪದವಾಗುವುದರಿಂದ ಕನ್ನಡದ ವಿರುದ್ಧವಾಗಿರುವ ದ್ರಾವಿಡ ವಿಚಾರ ಕಲಾ ಮೇಳವನ್ನು ರದ್ದುಪಡಿಸುವ ಬಗ್ಗೆ | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಹಿರಿಯ ನಾಗರೀಕರು ಹಾಗೂ ವಿಕಲಚೇತನರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಉತ್ತರಿಸಿದರು |

| | | | | |
|---|---|---|---|---|
| 18 | **ಎನ್.ರವಿಕುಮಾರ್** | 14.12.2018 | ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ನಡೆದಿರುವ ಹಗರಣಗಳ ಕುರಿತು | ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು |
| 19 | **ಎಂ.ಕೆ.ಪ್ರಾಣೇಶ್** | 14.12.2018 | ರಾಜ್ಯದಲ್ಲಿ ಆಹಾರ ಪರೀಕ್ಷೆಗೆ ಅಗತ್ಯಕ್ಕೆ ತಕ್ಕಷ್ಟು ಪ್ರಯೋಗಾಲಯಗಳು ಇಲ್ಲದಿರುವ ಕುರಿತು | ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 20 | **ಎಂ.ಪಿ.ಸುನೀಲ್ ಸುಬ್ರಮಣಿ** | 14.12.2018 | ಕೊಡಗು ಜಿಲ್ಲೆಯಲ್ಲಿನ ಪ್ರವಾಸಿ ತಾಣಗಳನ್ನು ಅಭಿವೃದ್ಧಿ ಪಡಿಸುವ ಬಗ್ಗೆ | ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು |
| 21 | **ಕೆ.ಪಿ.ನಂಜುಂಡಿ ವಿಶ್ವಕರ್ಮ** | 14.12.2018 | ರಾಜ್ಯದ ಚಾಮುಂಡಿ ಬೆಟ್ಟದ ಚಾಮುಂಡೇಶ್ವರಿ ದೇವಾಲಯದ ಅರ್ಚಕರು ಹಾಗೂ ನೌಕರರು ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಧರಣಿ ನಡೆಸುತ್ತಿರುವ ಕುರಿತು | ದಿ:17.12.2018ರಂದು ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು. |
| 22 | **ಡಾ: ತೇಜಸ್ವಿನಿಗೌಡ** | 14.12.2018 | ಇಂದಿರಾ ಕ್ಯಾಂಟೀನ್ ಯೋಜನೆಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ | ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಉಪ ಮುಖ್ಯಮಂತ್ರಿಯವರು ತಿಳಿಸಿದರು |
| 23 | **ಎಸ್.ರುದ್ರೇಗೌಡ** | 14.12.2018 | ರೈತರು ಭೂ ದಾಖಲೆಗಳನ್ನು ಆನ್‌ಲೈನ್ ಮೂಲಕ ಪಡೆಯುವ ಆರ್.ಟಿ.ಸಿ ಯೋಜನೆಯನ್ನು ಸರ್ಕಾರಿ ಸಂಸ್ಥೆಗಳಿಗೆ ನೀಡುವ ಕುರಿತು | ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಉಪ ಮುಖ್ಯಮಂತ್ರಿಯವರು ತಿಳಿಸಿದರು |
| 24 | **ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ** | 14.12.2018 | ಮಹಾತ್ಮಗಾಂಧಿ ಉದ್ಯೋಗ ಖಾತ್ರಿ (ನರೇಗ) ಯೋಜನೆಯಡಿಯಲ್ಲಿ ರೂ.410 ಕೋಟಿಗಳ ಅಕ್ರಮ ನಡೆದಿರುವ ಬಗ್ಗೆ | ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಉಪ ಮುಖ್ಯಮಂತ್ರಿಯವರು ತಿಳಿಸಿದರು |
| 25 | **ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ** | 17.12.2018 | ಮಹಾರಾಷ್ಟ್ರ–ಕರ್ನಾಟಕ ಗಡಿ ಭಾಗದ ಹಿಂಗ್ಲಜ್ ತಾಲ್ಲೂಕಿನ ಪೂರ್ವ | ಮಾನ್ಯ ಸಭಾನಾಯಕರು ಉತ್ತರಿಸಿದರು. |

| | | | | |
|---|---|---|---|---|
| | | | ಭಾಗದಲ್ಲಿರುವ ಕನ್ನಡಿಗರ ಪ್ರಾಬಲ್ಯದ 22 ಹಳ್ಳಿಗಳ ಸುಧಾರಣೆ ಕುರಿತು | |
| 26 | **ಎಂ.ಪಿ.ಸುನೀಲ್ ಸುಬ್ರಮಣಿ** | 17.12.2018 | ಮಡಿಕೇರಿಯ ತಾಲ್ಲೂಕಿನ ನಾಪೋಕ್ಲು ಭಾಗದಲ್ಲಿ "ಭತ್ತ ಬೆಳೆಯುವತ್ತ ರೈತನ ಚಿತ್ತ ಇಲ್ಲದಿದ್ದರೆ ಗದ್ದೆ ಸರ್ಕಾರದತ್ತ" ಎಂಬ ನಾಮಫಲಕ ಹಾಕಿರುವ ಕುರಿತು | ದಿನಾಂಕ:18.12.2018 ರಂದು ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು. |
| 27 | **ಐವನ್ ಡಿ'ಸೋಜಾ** | 17.12.2018 | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ರಸ್ತೆಯಲ್ಲಿ ಅವೈಜ್ಞಾನಿಕವಾಗಿ ಟೋಲ್‌ಗೇಟ್ ಅಳವಡಿಸಿ ಸಾರ್ವಜನಿಕರಿಂದ ಹಣ ವಸೂಲಿ ಮಾಡುತ್ತಿರುವ ಕುರಿತು | ಮಾನ್ಯ ಸಭಾನಾಯಕರು ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |
| 28 | **ಶ್ರೀನಿವಾಸ್ ವಿ.ಮಾನೆ** | 18.12.2018 | ಹಾನಗಲ್ ತಾಲ್ಲೂಕಿನ ರೈತರಿಗೆ ಬೆಳೆ ವಿಮೆ ವಿತರಣೆಯಲ್ಲಿ ರಾಷ್ಟ್ರೀಕೃತ ಬ್ಯಾಂಕಿನವರು ತಾರತಮ್ಯ ಮಾಡಿರುವ ಕುರಿತು | ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು ಉತ್ತರಿಸಿದರು |
| 29 | **ಎಸ್.ವ್ಹಿ.ಸಂಕನೂರ** | 18.12.2018 | ಬೆಳಗಾವಿಯ ಸುವರ್ಣ ವಿಧಾನಸೌಧಕ್ಕೆ ಕೆಲವು ಕಛೇರಿಗಳನ್ನು ಸ್ಥಳಾಂತರಿಸುವ ಬಗ್ಗೆ | ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು ಉತ್ತರಿಸಿದರು. |
| 30 | **ಘೋಟ್ನೆಕರ್ ಶ್ರೀಕಾಂತ ಲಕ್ಷ್ಮಣ** | 18.12.2018 | ಕೈಗಾ ಪರಮಾಣು ವಿದ್ಯುತ್ ಸ್ಥಾವರದ 5 ಮತ್ತು 6ನೇ ಘಟಕ ನಿರ್ಮಾಣಕ್ಕೆ ಸಾರ್ವಜನಿಕರು ವಿರೋಧ ವ್ಯಕ್ತಪಡಿಸುತ್ತಿರುವ ಬಗ್ಗೆ | ದಿ:19.12.2018ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಕಾನೂನು ಸಚಿವರು ಉತ್ತರವನ್ನು ಮಂಡಿಸಿದರು. |
| 31 | **ಐವನ್ ಡಿ'ಸೋಜಾ** | 18.12.2018 | ರಾಜ್ಯ ಸರ್ಕಾರಿ ನೌಕರರಿಗೆ ಇರುವ ನಿರ್ಬಂಧಿತ ರಜಾ ಪಟ್ಟಿಯಲ್ಲಿ ಕ್ರೈಸ್ತ ಸಮುದಾಯದವರಿಗೆ ಪವಿತ್ರ ಹಬ್ಬವಾದ ಕನ್ಯಾಮಾರಿಯಮ್ಮ ಜಯಂತಿ ಹಬ್ಬವನ್ನು ಸೇರಿಸುವ ಬಗ್ಗೆ | ದಿ:19.12.2018ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಕಾನೂನು ಸಚಿವರು ಉತ್ತರವನ್ನು ಮಂಡಿಸಿದರು. |

| | | | | |
|---|---|---|---|---|
| 32 | **ಎನ್.ರವಿಕುಮಾರ್** | 18.12.2018 | ಉತ್ತರ ಕರ್ನಾಟಕದಲ್ಲಿ ಕೈಗಾರಿಕಾ ಪಾರ್ಕ್ ಸ್ಥಾಪನೆ ಹಾಗೂ ಅವುಗಳಿಗೆ ಸಂಬಂಧಿಸಿದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ವಿಶೇಷ ಅನುದಾನ ಬಿಡುಗಡೆ ಮಾಡುವ ಬಗ್ಗೆ | ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |
| 33 | **ಎಸ್.ಆರ್.ಪಾಟೀಲ್** | 18.12.2018 | ಬಾಗಲಕೋಟೆ ಜಿಲ್ಲೆಯಲ್ಲಿ ದಿನಾಂಕ:14.12.2018ರಂದು 13 ಪ್ರಾಥಮಿಕ ಶಾಲಾ ಸಹ ಶಿಕ್ಷಕರನ್ನು ಮತ್ತು 5 ಜನ ಅಂಗನವಾಡಿ ಕಾರ್ಯಕರ್ತೆಯರನ್ನು ಅಮಾನತ್ತು ಮಾಡಿರುವ ಕುರಿತು | ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |
| 34 | **ಎಂ.ಕೆ.ಪ್ರಾಣೇಶ್** | 18.12.2018 | ಚಿಕ್ಕಮಗಳೂರು ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಮತ್ತು ಕೃಷಿ ಉದ್ದೇಶಕ್ಕಾಗಿ ನೀಡುವ ನೀರಿನ ಹಕ್ಕು ಪತ್ರ ದೃಢೀಕರಣವನ್ನು ನೀಡುವಲ್ಲಿ ಗೊಂದಲ ಉಂಟಾಗಿರುವ ಬಗ್ಗೆ | ದಿನಾಂಕ:21.12.2018 ರಂದು ಉತ್ತರವನ್ನು ಮಾನ್ಯ ಸಭಾನಾಯಕರು ಮಂಡಿಸಿದರು. |
| 35 | **ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ** | 18.12.2018 | ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ 14 ಹಳ್ಳಿಗಳ ಉಪಯೋಗಕ್ಕಾಗಿ ಮಹಾಲಕ್ಷ್ಮಿ ಏತ ನೀರಾವರಿ ಯೋಜನೆಯನ್ನು ಪೂರ್ಣಗೊಳಿಸುವ ಬಗ್ಗೆ | ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು ಉತ್ತರಿಸಿದರು |
| 36 | **ಎಸ್.ನಾಗರಾಜು (ಸಂದೇಶ ನಾಗರಾಜು)** | 18.12.2018 | ಹೆಚ್.ಡಿ.ಕೋಟೆ ತಾಲ್ಲೂಕಿನ ಸರಗೂರು ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಸ್ಥಾಪಿಸಿರುವ ಭತ್ತ ಖರೀದಿ ಕೇಂದ್ರದಲ್ಲಿ ಜ್ಯೋತಿ ತಳಿ ಭತ್ತವನ್ನು ಖರೀದಿಸಲು ನಿರಾಕರಿಸುತ್ತಿರುವ ಬಗ್ಗೆ | ದಿ:19.12.2018ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಕಾನೂನು ಸಚಿವರು ಉತ್ತರವನ್ನು ಮಂಡಿಸಿದರು. |
| 37 | **ಯು.ಬಿ.ವೆಂಕಟೇಶ್** | 18.12.2018 | ಬೆಂಗಳೂರಿನ ಮೆಜೆಸ್ಟಿಕ್ ಪ್ರದೇಶದಲ್ಲಿ ಸಾರ್ವಜನಿಕರು ಮೋಸ/ವಂಚನೆಗೆ ಒಳಗಾಗುವುದನ್ನು ತಡೆಗಟ್ಟುವ ಬಗ್ಗೆ | ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು ಮಾನ್ಯ |

| | | | | |
|---|---|---|---|---|
| | | | | ಉಪ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |
| 38 | **ಬಸವರಾಜ ಶಿವಲಿಂಗಪ್ಪ ಹೊರಟ್ಟಿ** | 19.12.2018 | ಬೆಳಗಾವಿ, ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ವಿದ್ಯುತ್ ಅವಘಡಗಳು ಜರುಗದಂತೆ ಹಾನಿಗೆ ಪರಿಹಾರ ಕ್ರಮ ಕೈಗೊಳ್ಳುವ ಬಗ್ಗೆ | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |
| 39 | **ಡಾ: ತೇಜಸ್ವಿನಿಗೌಡ** | 19.12.2018 | ಬೆಳಗಾವಿ ಜಿಲ್ಲೆಯ ನಂತರ ಕನ್ನಡನಾಡಿನ ಗಡಿಯೊಳಗೆ ಬರುವ ಎಲ್ಲಾ ಗ್ರಾಮಗಳ ಹೆಸರನ್ನು ಗಾಂವ ಎಂದಿರುವ ಬದಲು ಗ್ರಾಮ ಎಂದು ಮರುನಾಮಕರಣ ಮಾಡುವ ಬಗ್ಗೆ | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |
| 40 | **ಕೆ.ಗೋವಿಂದರಾಜ್** | 19.12.2018 | ಬೆಂಗಳೂರು ನಗರದ ಟ್ರಿನಿಟಿ ವೃತ್ತದ ಮೆಟ್ರೋ ನಿಲ್ದಾಣದ ಬಳಿಯಲ್ಲಿ ಪಿಲ್ಲರ್-155ರ ವಯಾಡಕ್ಟ್‌ನಲ್ಲಿ ಕಾಂಕ್ರೀಟ್ ಶಿಥಿಲವಾಗಿರುವ ಬಗ್ಗೆ | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಾನ್ಯ ಉಪ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು. |
| 41 | **ಎಂ.ಪಿ.ಸುನೀಲ್ ಸುಬ್ರಮಣಿ** | 19.12.2018 | ಪೋಲೀಸ್ ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿದ್ದ ಜಾಡಮಾಲಿ ಸಿಬ್ಬಂದಿಗಳನ್ನು ಸೇವೆಯಿಂದ ವಜಾ ಮಾಡಿರುವ ಕುರಿತು | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಾನ್ಯ ಉಪ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |

| | | | | |
|---|---|---|---|---|
| 42 | **ಎನ್.ರವಿಕುಮಾರ್** | 19.12.2018 | ಹಾಸನ ಜಿಲ್ಲೆಯ ಸಾವಂತಹಳ್ಳಿ ಗ್ರಾಮದ ಕೃಷ್ಣೇಗೌಡ ಎಂಬುವರ ತೋಟದಲ್ಲಿ ಅಕ್ರಮವಾಗಿ 52 ಕಾರ್ಮಿಕರನ್ನು ಜೀತಕ್ಕೆ ಇಟ್ಟುಕೊಂಡಿರುವ ಕುರಿತು | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |
| 43 | **ರಘುನಾಥ್‌ರಾವ್ ಮಲ್ಕಾಪುರೆ** | 19.12.2018 | ಬೀದರ್ ಜಿಲ್ಲೆಯಾದ್ಯಂತ ರೈತರು ಸಾಲ ಪಡೆದು ಬೆಳೆದಿರುವ ಕಬ್ಬಿಗೆ ಸಾಗಾಣಿಕೆ ವ್ಯವಸ್ಥೆಯಲ್ಲಿ ಪಾರದರ್ಶಕತೆ ಇಲ್ಲದಿರುವ ಹಾಗೂ ಕಬ್ಬಿನ ಕಟಾವಿಗೆ ಬಾರದ ಕಾರ್ಖಾನೆಯ ವಿಮುಖ ನೀತಿಯಿಂದಾಗಿ ಕಬ್ಬು ಬೆಳೆ ಒಣಗುತ್ತಿರುವ ಬಗ್ಗೆ | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |
| 44 | **ಆಯನೂರು ಮಂಜುನಾಥ್** | 19.12.2018 | ಕರಾವಳಿ ಜಿಲ್ಲೆಯ ಜನಪ್ರಿಯ ಜಾನಪದ ಕ್ರೀಡೆಯಾದ ಕಂಬಳ ಕ್ರೀಡೆಯನ್ನು ಮುಂದುವರೆಸುವ ಬಗ್ಗೆ ಸಾಂವಿಧಾನಿಕ ಪೀಠಕ್ಕೆ ಮನವರಿಕೆ ಮಾಡುವ ಕುರಿತು | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಉತ್ತರಿಸಿದರು |
| 45 | **ಡಾ: ವೈ.ಎ.ನಾರಾಯಣಸ್ವಾಮಿ** | 19.12.2018 | ಶಿಕ್ಷಣ ಇಲಾಖೆಯ ಕಾರ್ಯನಿರ್ವಹಣೆ ವೈಫಲ್ಯದಿಂದಾಗಿ ಎಸ್.ಎಸ್.ಎ/ಆರ್.ಎಂ.ಎಸ್.ಎ. ಶಿಕ್ಷಕರಿಗೆ ಕಳೆದ ಹತ್ತು ತಿಂಗಳನಿಂದ ವೇತನ ಬಿಡುಗಡೆಯಾಗದಿರುವ ಬಗ್ಗೆ | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು. |
| 46 | **ಎಸ್.ವ್ಹಿ.ಸಂಕನೂರ** | 19.12.2018 | ಶಿಕ್ಷಣ ಇಲಾಖೆಯು ನಡೆಸಿದ ಉಪಗ್ರಹ ಆಧಾರಿತ ಮ್ಯಾಪಿಂಗ್ ಪ್ರಕಾರ 5272 ಗ್ರಾಮಗಳಲ್ಲಿ ಶಾಲೆಗಳು ಇಲ್ಲದಿರುವುದರಿಂದ ಸಾವಿರಾರು ಮಕ್ಕಳು ಶಿಕ್ಷಣದಿಂದ ವಂಚಿತರಾಗಿರುವ ಬಗ್ಗೆ | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಾನ್ಯ ಮುಖ್ಯಮಂತ್ರಿಯವರಿಂದ |

| | | | | |
|---|---|---|---|---|
| | | | | ಉತ್ತರ ಕೊಡಿಸುವುದಾಗಿ ತಿಳಿಸಿದರು |
| 47 | **ಅರುಣ ಶಹಾಪೂರ** | 19.12.2018 | 500 ಜೆ.ಓ.ಸಿ ಶಿಕ್ಷಕರನ್ನು ಖಾಯಂಗೊಳಿಸುವ ಸಂಬಂಧ ವಿಧೇಯಕಕ್ಕೆ ತಿದ್ದುಪಡಿ ತರುವ ಕುರಿತು | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರಿಸಿದರು. |

**ವಿವರಣಾ ಪಟ್ಟಿ-5**

**ಗಮನ ಸೆಳೆಯುವ ಸೂಚನೆಗಳ ಪಟ್ಟಿ**

| ಕ್ರಮ ಸಂಖ್ಯೆ | **ಸದಸ್ಯರ ಹೆಸರು ಶ್ರೀಮತಿ:ಶ್ರೀಯುತರುಗಳಾದ** | **ವಿಷಯ** | **ಚರ್ಚೆಗೆ ತೆಗೆದು ಕೊಂಡ ದಿನಾಂಕ** | **ಷರಾ** |
|---|---|---|---|---|
| 01 | **ಶ್ರೀ ಐವನ್ ಡಿ'ಸೋಜ** | ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಕ್ರೀಡಾ ನೀತಿಯನ್ನು ಜಾರಿಗೆ ತರಲು ಮತ್ತು ಕ್ರೀಡೆಯಲ್ಲಿ ಭಾಗವಹಿಸುವವರಿಗೆ ಉದ್ಯೋಗಗಳನ್ನು ಮೀಸಲಿಡುವಂತೆ ಸರ್ಕಾರವು ಕ್ರಮ ಕೈಗೊಳ್ಳುವ ಬಗ್ಗೆ | 11.12.2018 | ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರಿಸಿದರು. |
| 02 | ಪುಟ್ಟಣ್ಣ, ಅರುಣ ಶಹಾಪುರ, ಐವನ್ ಡಿ'ಸೋಜಾ ಹಾಗೂ ಕೆ.ಹರೀಶ್ ಕುಮಾರ್ | ದಿನಾಂಕ:01.04.2006ರ ನಂತರ ನೇಮಕಾತಿ ಹೊಂದಿರುವ ಸರ್ಕಾರಿ ನೌಕರರುಗಳಿಗೆ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸುವ ಕುರಿತು | **11.12.2018** | ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಉತ್ತರಿಸಿದರು. |

| | | | | |
|---|---|---|---|---|
| ೦3 | **ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ**(ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು) | ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ನಡುವೆ ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ 4 ಟಿ.ಎಂ.ಸಿ ನೀರನ್ನು ಹಂಚಿಕೆ ಮಾಡುವುದಕ್ಕೆ ಸಂಬಂಧಪಟ್ಟಂತೆ ಶಾಶ್ವತ ಒಡಂಬಡಿಕೆ ಮಾಡಿಕೊಳ್ಳುವ ಕುರಿತು | **11.12.2018** | ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಉತ್ತರಿಸಿದರು. |
| ೦4 | **ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ** | ರಾಜ್ಯ ಸರ್ಕಾರದಿಂದ ಆಚರಿಸುತ್ತಿರುವ ಟಿಪ್ಪು ಸುಲ್ತಾನ್ ಜಯಂತಿಯಿಂದಾಗಿ ಕೊಡವರ ಮನಸ್ಸಿಗೆ ನೋವನ್ನುಂಟು ಮಾಡಿರುವುದಲ್ಲದೆ, ಕೋಮು ಸೌಹಾರ್ದತೆ ಹಾಳುಮಾಡಿರುವ ಬಗ್ಗೆ | **12.12.2018** | ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ತಿಳಿಸಿದರು. |
| ೦5 | **ಶ್ರೀ ಎಸ್.ಎಲ್.ಧರ್ಮೇಗೌಡ** | ಚಿಕ್ಕಮಗಳೂರು ತಾಲ್ಲೂಕಿನ ಲಕ್ಯಾ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು ಮಾಡಿ ತದನಂತರ ರದ್ದು ಮಾಡಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗಿರುವ ಬಗ್ಗೆ | **12.12.2018** | ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು 7 ದಿನಗಳ ಕಾಲಾವಕಾಶವನ್ನು ಕೋರಿದರು. |
| ೦6 | **ಡಾ: ವೈ.ಎ. ನಾರಾಯಣಸ್ವಾಮಿ** | ವಾಜಪೇಯಿ ನಗರ ವಸತಿ ಯೋಜನೆಯಡಿಯಲ್ಲಿ ನಿರ್ಮಿಸಿರುವ 75 ಮನೆಗಳನ್ನು ೨೦೦8ರಲ್ಲಿ ಹೆಬ್ಬಾಳ ವಿಧಾನ ಸಭಾ ಕ್ಷೇತ್ರದ ನಿವಾಸಿಗಳಿಗೆ ಹಂಚಿಕೆ ಮಾಡಿರುವ ಫಲಾನುಭವಿಗಳು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಸಂಪೂರ್ಣವಾಗಿ ಹಣವನ್ನು ಪಾವತಿಸಿದ್ದರೂ ಸಹ ಮನೆಗಳ ಸ್ವಾಧೀನ ಹಾಗೂ ಹಕ್ಕು ಪತ್ರ ನೀಡದಿರುವ ಬಗ್ಗೆ | **13.12.2018** | ಮಾನ್ಯ ನಗರಾಭಿವೃದ್ಧಿ ಮತ್ತು ವಸತಿ ಸಚಿವರು ಉತ್ತರಿಸಿದರು. |

| | | | | |
|---|---|---|---|---|
| 07 | **ಶ್ರೀಯುತರುಗಳಾದ: ಟಿ.ಎ. ಶರವಣ ಹಾಗೂ ಕೆ.ಟಿ. ಶ್ರೀಕಂಠೇಗೌಡ** | ಬೆಂಗಳೂರು ಮಹಾನಗರ ಪಾಲಿಕೆಯ ಮಹದೇವಪುರ ವ್ಯಾಪ್ತಿಯಲ್ಲಿನ ಮಂಡೂರು ತ್ಯಾಜ್ಯ ವಿಲೇವಾರಿ ಘಟಕದ ಯೋಜನೆಯು ಸಮರ್ಪಕವಾಗಿ ಫಲಕಾರಿಯಾಗದಿರುವ ಬಗ್ಗೆ | **13.12.2018** | ಮಾನ್ಯ ಉಪ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ನಗರಾಭಿವೃದ್ಧಿ ಮತ್ತು ವಸತಿ ಸಚಿವರು ಉತ್ತರಿಸಿದರು. |
| 08 | **ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮಾನ್ಯ ವಿರೋಧ ಪಕ್ಷದ ನಾಯಕರು) ಹಾಗೂ ಶ್ರೀಯುತರುಗಳಾದ: ಬಿ.ಜಿ.ಪಾಟೀಲ್, ಎಂ.ಕೆ.ಪ್ರಾಣೇಶ್ ಹಾಗೂ ಎಂ.ಪಿ.ಸುನೀಲ್ ಸುಬ್ರಮಣಿ** | ಬಾಪೂಜಿ ಸೇವಾ ಕೇಂದ್ರಗಳಲ್ಲಿ ಸಿಬ್ಬಂದಿಗಳನ್ನು ನೇಮಿಸದಿರುವುದು ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸದಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗಿರುವ ಕುರಿತು | **18.12.2018** | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಉತ್ತರಿಸಿದರು. |
| 09 | **ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ** | ಚಿನ್ನ-ಬೆಳ್ಳಿ ಕೆಲಸಗಾರರ ಮೇಲೆ ವಿನಾ ಕಾರಣ ದೂರು ದಾಖಲು ಮಾಡುತ್ತಿರುವುದು, ಕಳ್ಳತನ ಪ್ರಕರಣಗಳ ತನಿಖೆ ನೆಪದಲ್ಲಿ ಚಿನ್ನ-ಬೆಳ್ಳಿ ಕೆಲಸಗಾರರ ಮೇಲೆ ದೌರ್ಜನ್ಯ ನಡೆಸುತ್ತಿರುವ ಬಗ್ಗೆ | **18.12.2018** | ಮಾನ್ಯ ಉಪ ಮುಖ್ಯಮಂತ್ರಿಯವರು ಉತ್ತರಿಸಿದರು. |
| 10 | **ಶ್ರೀ ಎಂ.ಸಿ.ವೇಣುಗೋಪಾಲ್** | ಬೆಂಗಳೂರು ನಗರದಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಸಿ.ಎ ನಿವೇಶನಗಳನ್ನು ಗುತ್ತಿಗೆ ಪಡೆದ ಸಂಸ್ಥೆಗಳು ನಿವೇಶನ ಪಡೆಯುವ ಸಂದರ್ಭದಲ್ಲಿ ತಿಳಿಸಿದ ಉದ್ದೇಶಕ್ಕಾಗಿ ಉಪಯೋಗಿಸದೆ ಬೇರೆ ಉದ್ದೇಶಕ್ಕಾಗಿ ಉಪಯೋಗಿಸುತ್ತಿರುವ ಬಗ್ಗೆ | **18.12.2018** | ಮಾನ್ಯ ಉಪ ಮುಖ್ಯಮಂತ್ರಿಯವರು ಉತ್ತರಿಸಿದರು. |

**ವಿವರಣಾ ಪಟ್ಟಿ -6**
**ನಿಯಮ 330ರ ಮೇರೆಗೆ**

| ಕ್ರಮ ಸಂಖ್ಯೆ | **ಸದಸ್ಯರ ಹೆಸರು ಶ್ರೀಮತಿ:ಶ್ರೀಯುತರುಗಳಾದ:** | **ವಿಷಯ** | **ಚರ್ಚೆಗೆ ತೆಗೆದುಕೊಂಡ ದಿನಾಂಕ** | **ಷರಾ** |
|---|---|---|---|---|
| 01 | ಕೆ.ಸಿ.ಕೊಂಡಯ್ಯ ಮತ್ತು ಶರಣಪ್ಪ ಮಟ್ಟೂರ | ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ 2013-14ನೇ ಸಾಲಿನಿಂದ ಇಲ್ಲಿಯವರೆಗೆ ಆಯವ್ಯಯದಲ್ಲಿ ಅನುದಾನ ಘೋಷಣೆ ಮಾಡಲಾಗಿದ್ದರೂ ಅನುದಾನ | 11.12.2018 | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ |

| | | | | |
|---|---|---|---|---|
| | | ಬಿಡುಗಡೆ ಮಾಡದಿರುವ ಹಾಗೂ 2018-19ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವ ಅನುದಾನದಲ್ಲಿ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಅನುದಾನ ಹೊರತುಪಡಿಸಿ ಮಂಡಳಿಗೆ ಬಿಡುಗಡೆ ಮಾಡುವ ಕುರಿತು | | ವ್ಯವಹಾರಗಳ ಸಚಿವರು ಉತ್ತರಿಸಿದರು. |
| 02 | **ಡಾ: ವೈ.ಎ.ನಾರಾಯಣಸ್ವಾಮಿ** | ರಾಜ್ಯ ಸರ್ಕಾರಿ ನೌಕರರು ಕರ್ನಾಟಕ ಸರ್ಕಾರ ವಿಮಾ ಇಲಾಖೆಗೆ ಕಟ್ಟುತ್ತಿರುವ ವಂತಿಗೆಯ ಮಾಹಿತಿಯು ಗಣಕೀಕೃತಗೊಂಡಿಲ್ಲದ ಕಾರಣ ಸರಿಯಾದ ಸಮಯಕ್ಕೆ ವಿಮಾ ಬಾಂಡ್ ಪಡೆಯುವಲ್ಲಿ 5 ರಿಂದ 6 ತಿಂಗಳಕಾಲ ವಿಳಂಬವಾಗುತ್ತಿರುವ ಕುರಿತು | 11.12.2018 | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಉತ್ತರಿಸಿದರು. |
| 03 | **ಶ್ರೀ ಎನ್.ರವಿಕುಮಾರ್** | ಬೆಂಗಳೂರು ನಗರದ ಮಾರತ್‌ಹಳ್ಳಿ, ಜಕ್ಕಸಂದ್ರ, ಸರ್ಜಾಪುರ, ಬೆಳ್ಳಂದೂರು, ದೇವರಬೀಸನಹಳ್ಳಿ, ಕಾಡುಬೀಸನಹಳ್ಳಿ ಮುಂತಾದ ಕಡೆಗಳಲ್ಲಿ ಅಕ್ರಮವಾಗಿ ಪ್ರವೇಶಿಸಿ ಬಾಂಗ್ಲಾದೇಶಿಯರ ಕ್ಯಾಂಪ್‌ಗಳಲ್ಲಿ ನೆಲೆಸಿರುವ ರೊಹಿಂಗ್ಯರು ಹಲ್ಲೆ, ದರೋಡೆ, ಕಳ್ಳತನ ಮುಂತಾದ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವ ಹಿನ್ನಲೆಯಲ್ಲಿ ಸಾರ್ವಜನಿಕರು ಆತಂಕಕ್ಕೀಡಾಗಿರುವ ಬಗ್ಗೆ ಪ್ರಸ್ತಾಪಿಸಿದರು | 11.12.2018 | ಮಾನ್ಯ ಉಪ ಮುಖ್ಯಮಂತ್ರಿಯವರು ಉತ್ತರಿಸಿದರು. |
| 04 | **ಶ್ರೀ ಪುಟ್ಟಣ** | ಸರ್ಕಾರವು ಅನುದಾನಿತ ಶಿಕ್ಷಣ ಸಂಸ್ಥೆಗಳ ಕಾಲ್ಪನಿಕ ವೇತನ ಬಡ್ತಿ ಸಮಸ್ಯೆಯನ್ನು ಪರಿಹರಿಸುವ ಬಗ್ಗೆ | 12.12.2018 | ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರಿಸಿದರು |

| | | | | |
|---|---|---|---|---|
| ೦5 | **ಡಾ: ತೇಜಸ್ವಿನಿಗೌಡ** | ವಿಧಾನ ಸೌಧದ ಸ್ವಚ್ಛತೆ ಹಾಗೂ ಕಾರ್ಯನಿರ್ವಹಣೆ ಬಗ್ಗೆ | 12.12.2018 | ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರಿಸಿದರು |
| ೦6 | **ಹೆಚ್.ಎಂ. ರೇವಣ್ಣ, ಕೆ. ಅಬ್ದುಲ್ ಜಬ್ಬಾರ್, ಪಿ.ಆರ್. ರಮೇಶ್ ಹಾಗೂ ಜಿ. ರಘು ಆಚಾರ್** | ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಆಶ್ರಯದಲ್ಲಿ ಕೈಗೊಂಡ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ನೀಡುವಲ್ಲಿ ವಿಳಂಬವಾಗಿರುವ ಬಗ್ಗೆ | 13.12.2018 | ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಉತ್ತರಿಸಿದರು. |
| ೦7 | **ಐವನ್ ಡಿ'ಸೋಜಾ, ಬಿ.ಎಂ.ಫಾರೂಖ್ ಹಾಗೂ ಕೆ.ಹರೀಶ್ ಕುಮಾರ್** | ಕರಾವಳಿ ಜಿಲ್ಲೆಗಳಲ್ಲಿ ಮರಳು ಸಮಸ್ಯೆ ತೀವ್ರಗೊಂಡಿದ್ದು, ಈ ಸಂಬಂಧ ಸರ್ಕಾರ ಮತ್ತು ಖಾಸಗಿ ಕಾಮಗಾರಿಗಳು ಸಂಪೂರ್ಣ ಸ್ಥಗಿತಗೊಂಡಿರುವುದರಿಂದ ಕಾರ್ಮಿಕರು ತೊಂದರೆ ಅನುಭವಿಸುತ್ತಿರುವ ಬಗ್ಗೆ | 18.12.2018 | ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಉತ್ತರಿಸಿದರು. |

**ವಿವರಣಾ ಪಟ್ಟಿ –೦7**

**ಸದನಕ್ಕೆ ಒಪ್ಪಿಸಲಾದ ವರದಿಗಳ ಪಟ್ಟಿ**

| ಕ್ರ. ಸಂ | ಸಮಿತಿಯ ಹೆಸರು | ಒಪ್ಪಿಸಿದ ದಿನಾಂಕ | ವಿಷಯ |
|---|---|---|---|
| ೦1 | ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿ | 12.12.2018 | ೯4ನೇ ವರದಿ |
| ೦2 | ವಿಧಾನ ಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ | 12.12.2018 | 34ನೇ ವರದಿ |
| ೦3 | ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ | 13.12.2018 | ಮಧ್ಯಂತರ ವರದಿ |
| ೦4 | ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ | 18.12.2018 | ಮೊದಲನೇ ವರದಿ |

**ಶಾಸನ ರಚನೆ-08**

**ವಿಧಾನ ಸಭೆಯಲ್ಲಿ ಅಂಗೀಕೃತಗೊಂಡು ವಿಧಾನ ಪರಿಷತ್ತಿನ ಸಹಮತಿ ಪಡೆದಿರುವ ವಿಧೇಯಕಗಳ ವಿವರ**

| ಕ್ರ ಸಂ | ವಿಧೇಯಕದ ಹೆಸರು | ವಿ .ಸ. ಯಲ್ಲಿ ಅಂಗೀಕರಿಸಿರುವ ದಿನಾಂಕ | ವಿ. ಪ. ನಲ್ಲಿ ಅಂಗೀಕರಿಸಿರುವ ದಿನಾಂಕ |
|---|---|---|---|
| 01 | ರೈ ತಾಂತ್ರಿಕ ವಿಶ್ವವಿದ್ಯಾಲಯ ಬೆಂಗಳೂರು (ತಿದ್ದುಪಡಿ) ವಿಧೇಯಕ, 2018 | 13.07.2018 | 17.12.2018 |
| 02 | ಕರ್ನಾಟಕ ಜೀವರಕ್ಷಕ ಮತ್ತು ವೈದ್ಯಕೀಯ ವೃತ್ತಿನಿರತರ ತುರ್ತು ಸನ್ನಿವೇಶಗಳಲ್ಲಿ ರಕ್ಷಣೆ ಮತ್ತು ನಿಯಂತ್ರಣ (ತಿದ್ದುಪಡಿ) ವಿಧೇಯಕ, 2018 | 13.07.2018 | 17.12.2018 |
| 03 | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2018 | 14.12.2018 | 17.12.2018 |
| 04 | ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2018 | 14.12.2018 | 17.12.2018 |
| 05 | ಕರ್ನಾಟಕ ಭೂ ಕಂದಾಯ (2ನೇ ತಿದ್ದುಪಡಿ) ವಿಧೇಯಕ, 2018 | 14.12.2018 | 17.12.2018 |
| 06 | ಕರ್ನಾಟಕ ಧನವಿನಿಯೋಗ (ಸಂಖ್ಯೆ .3) ವಿಧೇಯಕ, 2018 | 18.12.2018 | 19.12.2018 |

| | | | |
|---|---|---|---|
| 07 | ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ) ವಿಧೇಯಕ, 2018 | 18.12.2018 | 19.12.2018 |
| 08 | ಕರ್ನಾಟಕ ವಿಧಾನ ಮಂಡಲ (ಅನರ್ಹತಾ ನಿವಾರಣಾ) (ತಿದ್ದುಪಡಿ) ವಿಧೇಯಕ, 2018 | 21.12.2018 | 21.12.2018 |
| 09 | ಕರ್ನಾಟಕ ಸಿವಿಲ್ ಸೇವೆಗಳ (ನೇಮಕಾತಿಯ ಸಮಯದಲ್ಲಿ ಅಭ್ಯರ್ಥಿಗಳ ಆಯ್ಕೆಯ ಕಾರ್ಯವಿಧಾನ ವಿಧೇಯಕ, 2018 | 21.12.2018 | 21.12.2018 |

******